ಕ್ಲಿನಿಕ್, ವೈದ್ಯರ ವಸತಿ ಮನೆ ಇರುತ್ತದೆ. ನಾವು ಒಂದು ಒಳ್ಳೆಯ ಮಹಿಳಾ ವೈದ್ಯೆಯನ್ನು ಕಂಡುಹಿಡಿಯಬೇಕು. ಆಕೆಗೆ ವಯಸ್ಕರ ಚಿಕಿತ್ಸೆಯಲ್ಲದೆ, ಮಕ್ಕಳ ಚಿಕಿತ್ಸೆಯ ಬಗ್ಗೆಯೂ ತಿಳಿದಿರಬೇಕು. ಆಯುರ್ವೇದ ಜ್ಞಾನ ಮಾತ್ರವಲ್ಲ ಸಸ್ಯೌಷಧಗಳ ಬಗ್ಗೆಯೂ ಒಳ್ಳೆಯ ತಿಳಿವು ಇರಬೇಕು. ಹಳ್ಳಿಯ ಹಿರಿಯರು ಕಿರಿಯರು, ಎಲ್ಲರೂ ಚಿಕಿತ್ಸೆಗಾಗಿ ಇಲ್ಲಿಗೆ ಬರಬಹುದು. ಹೊರಗಿನಿಂದ ಬರುವವರಿಗಾಗಿ ನಾವು ಒಂದು 'ನಡೆದಾರಿ' ಮಾಡಿಸಬೇಕು.

ಮೂರು ಎಕರೆ ಜಾಗದಲ್ಲಿ ಕೇವಲ ಔಷಧೀಯ ಸಸ್ಯಗಳನ್ನು ಬೆಳೆಸುತ್ತೇವೆ. ಐದು ಎಕರೆ ಭೂಮಿಯಲ್ಲಿ ಮೋಪಿನ ಮರವಲ್ಲದ ಕೇವಲ ಕಾಡು ಮರಗಳನ್ನು ಬೆಳೆಸುತ್ತೇವೆ. ಪ್ರತಿಯೊಂದು ಮರಕ್ಕೂ ಕಾಳು ಮೆಣಸಿನ ಬಳ್ಳಿ ಹತ್ತಿಸುತ್ತೇವೆ. ಅಲ್ಲಿಯೇ ಐದು ಸೆಂಟ್ಸ್ ಜಾಗದಲ್ಲಿ ಕೇವಲ ಬಣ್ಣ ಬಣ್ಣದ ಬಿದಿರುಗಳನ್ನು ಬೆಳೆಸುತ್ತವೆ. ಬಿದಿರು ಸದಾ ಕಾಲ ನಾನಾ ರೀತಿಯಲ್ಲಿ ನಮ್ಮ ಉಪಯೋಗಕ್ಕೆ ಬರುವ ಸಸ್ಯ. ಬೆಳೆಯುತ್ತಾ ಇರುವ ಕಾಡಿನ ಕಾಲೆಕರೆ ಜಾಗದ ಒಂದು ಪಕ್ಕದಲ್ಲಿ ಒಂದು ಜಾನುವಾರು ಹಟ್ಟಿ ಕಟ್ಟುತ್ತೇವೆ. ಅದರಲ್ಲಿ ಎರಡು ಅಥವಾ ಮೂರು ಹಸುಗಳು ಇರುತ್ತವೆ. ಅವುಗಳ ಹಾಲು ನಮಗೆ ಸಾಕು. ಅವುಗಳ ಉಸ್ತುವಾರಿ ಮತ್ತು ಹಾಲು ಕರೆಯುವ ಕೆಲಸಕ್ಕೆ ಒಬ್ಬ ಕೆಲಸಗಾರ ಇರುತ್ತಾನೆ. ಈ ಹತ್ತು ಎಕರೆ ಜಾಗದಲ್ಲಿ ಹೊರಗಿನ ಕಾಯಂ ಕೆಲಸಗಾರ ಎಂದರೆ ಅವನೊಬ್ಬನೇ.

'ಹಾಲು ಶಾಲೆಯ ಮಕ್ಕಳಿಗೆ ಮಾಧ್ಯಾಹ್ನದ ಹೊತ್ತು ಒಂದೊಂದು ಲೋಟ ಹಾಲು ಕೊಡುವುದಕ್ಕೆ, ಆಯುರ್ವೇದ ವೈದ್ಯರಿಗೆ ಮತ್ತು ನಮ್ಮ ಕುಟುಂಬಕ್ಕೆ ಮಾತ್ರ. ಮಾರಾಟಕ್ಕೆ ಅಲ್ಲ' ಎಂದು ಹೇಳಿ ನರಹರಿ, 'ಇನ್ನು ನಮ್ಮ ಮೂರು ಕುಟುಂಬದ ಮನೆಗಳ ವಿಚಾರ. ಅದನ್ನು ಅಭಿ ಹೇಳುತ್ತಾನೆ' ಎಂದು ನರಹರಿ ಮಾತು ಮುಗಿಸಿದ.

ಅಭಿ ಹೇಳಿದ,'ಯಾರಿಗೂ ಯಾವ ಫೀಸೂ ಇರುವುದಿಲ್ಲ. ಮಧ್ಯಾಹ್ನ ಊಟದ ವ್ಯವಸ್ಥೆ ಇಲ್ಲ. ಯಾಕೆಂದರೆ, ಅದರ ಜೊತೆ ಯಾವತ್ತಾದರೂ ಒಂದು ದಿನ ಉಂಟಾಗುವ ಸಮಸ್ಯೆಯನ್ನು ನಾವು ಎದುರಿಸಲಾರೆವು. ಈಗ ನಮ್ಮದಾಗಿರುವ ಹತ್ತು ಎಕರೆ ವಿಸ್ತೀರ್ಣದ ಜಾಗವನ್ನು ನಾವು ಈ ರೀತಿ ಗುರುತಿಸುತ್ತೇವೆ: ಇಲ್ಲಿ ಹಣದ ಬಳಕೆ ಇಲ್ಲ. ಎಲ್ಲವೂ ಉಚಿತ ಎಂದು ಹೇಳುವುದಿಲ್ಲ. ಉಚಿತ' ಎಂಬ ಶಬ್ದದ ಬದಲು ಬಳಕೆಗೆ ಬೇರೆ ಶಬ್ದವನ್ನು ಕಂಡುಹಿಡಿಯಬೇಕಾಗಿದೆ. ಯಾಕೆಂದರೆ ಚಿಕ್ಕವರು, ದೊಡ್ಡವರು, ಹೊರಗಿನವರು, ಒಳಗಿನವರು, ಅತಿಥಿಗಳು ಯಾರಿಗೇ ಆಗಲಿ. ಇಲ್ಲಿ ಸ್ವಲ್ಪ ಬೆವರು ಸುರಿಸೋಣ ಎನ್ನುವ ಮನಸ್ಸು ಉಂಟಾದರೆ, ಅವರನ್ನು ಸ್ವಾಗತಿಸಿ, ಅವರಿಗೆ ಬೇಕಾದ ಹತ್ಯಾರುಗಳನ್ನು ಕೊಡುತ್ತೇವೆ.

ಇಲ್ಲಿ ಯಾವುದೇ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳನ್ನು ಬಳಸುವುದಿಲ್ಲ. ನಾವು ಬೆಳೆಯುವ ಸಸ್ಯಗಳಿಗೆ ನೀರು ಹರಿಸುವುದಿಲ್ಲ.ಯಾವ ಸಸ್ಯ ನೀರು ಬೇಕೆನ್ನುತ್ತದೆಯೋ ಆ ಸಸ್ಯಕ್ಕೆ ಇಸ್ರೇಲಿಯನರು ಮಾಡುವಂತೆ ಎರಡು ಮೂರು ಇಂಚು ಆಳಕ್ಕೆ ತಲುಪಲು ಮಾತ್ರ ಹನಿ ನೀರಾವರಿ ಪದ್ಧತಿಯಲ್ಲಿ ನೀರು ಕೊಡುತ್ತೇವೆ., ಇಲ್ಲಿ ಕಾಡಿಗೆ ಒಪ್ಪಿಸಿ ಉಳಿದ ಭಾಗದಲ್ಲಿ ನಾವು ಕೇವಲ ಹಣ್ಣು ನೀಡುವ ಎತ್ತರಕ್ಕೆ ಬೆಳೆಯದ, ಬಹಳ ಕಡಿಮೆ ತೇವದಲ್ಲಿ ಫಲವತ್ತಾಗಿ ಬೆಳೆಯಬಲ್ಲ ಪೇರಳೆ, ಚಿಕ್ಕು, ನೇರಳೆ, ರೆಂಜೆ, ಜಂಬುನೇರಳೆ, ನಿಂಬೆ, ಚಕೋತ, ಪುನರ್ಪುಳಿ ಮುಂತಾದ ಮರಗಳನ್ನು ಬೆಳೆಸುತ್ತೇವೆ. ಎಲ್ಲಾ ಕಡೆ ಹಲವು ಬಗೆಯ ಬಾಳೆಗಳನ್ನು ಬೆಳೆಸುತ್ತೇವೆ. ಒಂದೆರಡು ವರ್ಷ ಬಂದವರಿಗೆಲ್ಲ ಹಣ್ಣು ಹಂಪಲುಗಳನ್ನು ಉಚಿತವಾಗಿ ಕೊಡುತ್ತೇವೆ. ತುಂಬಾ ಹಣ್ಣು ಹಂಪಲು ಕಾಯಿಪಲ್ಲೆ ಬೆಳೆಯತೊಡಗಿದ ಮೇಲೆ ಮಾರುಕಟ್ಟೆಗೆ ಕಳಿಸುತ್ತೇವೆ.

ಹಣ್ಣುಹಂಪಲು ಕಾಯಿಪಲ್ಲೆ ಬೆಳೆವ ಒಳ ಅಂಚಿನಲ್ಲಿ, ಇಡೀ ತೋಟದಲ್ಲಿ ಸುತ್ತಲೂ ಹೆಚ್ಚು ನೀರುಣಿಸುವ ಅಗತ್ಯವಿಲ್ಲದ ಮತ್ತು ನೀರುಣಿಸಬೇಕಾದ ಅಗತ್ಯವೇ ಇಲ್ಲದ ಪಾರಿಜಾತ, ವರ್ಣ ವರ್ಣದ ದಾಸವಾಳ, ನಂದಿಬಟ್ಟಲು, ಜಾಜಿ, ಕನಕಾಂಬರ, ಮಲ್ಲಿಗೆ ಸುರಹೊನ್ನೆ, ಮುಂತಾದ ಗಿಡಗಳನ್ನು ಬೆಳೆಸುತ್ತೇವೆ. ಒಟ್ಟಿನಲ್ಲಿ, ತೋಟಕ್ಕೆ ಬರುವ ಮತ್ತು ಇಲ್ಲಿ ವಾಸಿಸುವ ಎಲ್ಲರ ಕಣ್ಣು ಮೂಗುಗಳಿಗೆ ಖುಷಿಯನ್ನು ನೀಡುವ ನಮ್ಮ ನಾಡಿನ ಮತ್ತು ನಮ್ಮ ದೇಶದ್ದೇ ಆದ ಹಲವು ಬಗೆಯ ಹೂಗಿಡಗಳನ್ನು ಬೆಳೆಸುತ್ತೇವೆ.

ಕಾಡು ಎಂಬುದಾಗಿ ಬೆಳೆಸುವ ಮರಗಳಲ್ಲಿ ಕೆಲವು ಎತ್ತರಕ್ಕೆ ಬೆಳೆಯುವ ಮರಗಳು; ಅವು ಎತ್ತರಕ್ಕೆ ಬೆಳೆಯದಂತೆ ಜಾಗ್ರತೆ ವಹಿಸುತ್ತೇವೆ. ಯಾಕೆಂದರೆ, ಬೇರಿನ ಮೂಲಕ ಬಹಳ ದೂರಕ್ಕೆ ಹೋಗುವ ಮರಗಳ ಬೇರುಗಳು ಬೇರೆ ಕಡೆಯಿರುವ ನೀರನ್ನು ಮತ್ತು ತೇವವನ್ನು ಹೀರುತ್ತವೆ. ಇಸ್ರೇಲಿನಲ್ಲಿ ನಾವು ಕಂಡುಕೊಂಡದ್ದು ಇದು; ಅವರು ಇಡೀ ದೇಶವನ್ನು ಗಿಡ್ಡನೆಯ ಮರಗಳ ಮೂಲಕ ಹಚ್ಚಹಸಿರಾಗಿಸಿದ್ದಾರೆ. ಎಲ್ಲಾ ಮರಗಿಡಗಳ ಜೀವ ಮತ್ತು ನಮ್ಮ ಜೀವ ಒಂದೇ ಎಂದು ಇಸ್ರೇಲಿಯರು ಹೇಳುತ್ತಾರೆ. ಅವರು ಎತ್ತರದ ಮೋಪಿನ ಮರ ಬೆಳೆಯುವ ದೇಶಗಳಿಂದ ಆ ದೇಶಗಳಲ್ಲೇ ತಯಾರಾದ ಸಕಲ ಗೃಹೋಪಯೋಗಿ ಸಾಧನಗಳನ್ನು ಆಮದು ಮಾಡಿಕೊಳ್ಳುತ್ತಾರೆ. ಹಲವು ದೇಶಗಳು ಈ ರೀತಿ ತಮ್ಮ ದೇಶದ ಮರಗಳನ್ನು ಉಳಿಸಿಕೊಳ್ಳುತ್ತಾರೆ.

ಐದು ಎಕರೆಯಲ್ಲಿ ಶಾಲೆ, ಶಾಲೆಗೆ ಹೊಂದಿಕೊಂಡು ಒಂದು ಗ್ರಂಥಾಲಯ, ಐದು ಎಕರೆಯಲ್ಲಿ ಮೂರು ಮನೆಗಳು, ಒಂದು ಸುಕೃತಿ ಕುಟುಂಬಕ್ಕೆ, ಒಂದು ಮುರಾರಿ ಕುಟುಂಬಕ್ಕೆ, ಇನ್ನೊಂದು ಅಭಿ ಮತ್ತು ನರಹರಿ ಕುಟುಂಬಕ್ಕೆ. ಈ ದೊಡ್ಡ ಮನೆ ಈ ರೀತಿ ಸಭೆ ಸೇರುವುದಕ್ಕೆ, ಮತ್ತು ತಾತ್ಕಾಲಿಕವಾದ ಅತಿಥಿಗಳ ವಾಸಕ್ಕೆ. ಸುಕೃತಿ ಮತ್ತು ಮುರಾರಿಯ ಕುಟುಂಬದವರು ಯಾವ ಹೊತ್ತೂ ಯಾರೊಡನೆಯೂ ಹೇಳದೆ ಕೇಳದೆ ನಮ್ಮ ಮನೆಗೆ ಬರಬಹುದು.

ಇನ್ನು ಮೂರು ಮನೆಗಳ ಸ್ವರೂಪದ ವಿಚಾರ: ಪ್ರತಿ ಮನೆಯಲ್ಲಿಯೂ ಅಡಿಗೆ ಎರಡು ವಾಸದ ಕೋಣೆಗಳು. ಕೋಣೆಗೆ ಹೊಂದಿಕೊಂಡು ಸ್ನಾನದ ಕೋಣೆ ಮತ್ತು ಶೌಚದ ಕೋಣೆ. ಪ್ರತಿ ಮನೆಗೂ ಹೊರಗಡೆ ಎರಡು ಸೆಂಟ್ಸ್ ಜಾಗ ಇರುತ್ತದೆ. ಆ ಜಾಗದಲ್ಲಿ ಮನೆಯ ಎಲ್ಲರೂ ಸೇರಿ ಹೂ ಗಿಡಗಳು ಮತ್ತು ತರಕಾರಿ ಗಿಡಗಳನ್ನು ಬೆಳೆಯಬೇಕು. ನಾಳೆ ಇದೇ ಹೊತ್ತಿಗೆ ಎಲ್ಲರೂ ಇಲ್ಲಿ ಮತ್ತೆ ಸೇರುತ್ತೇವೆ. ಕೆಲವು ಸಂಗತಿಗಳನ್ನು ಸ್ಪಷ್ಟಪಡಿಸಬೇಕಾದ ಅಗತ್ಯವಿದೆ. ಮುಂದೆಯೂ ತಿಂಗಳಿಗೆ ಒಂದು ಅಥವಾ ಎರಡು ಬಾರಿ ನಾವು ಇದೇ ರೀತಿ ಸೇರುತ್ತೇವೆ.

'ಇನ್ನು ಮನೆಯಲ್ಲಿ ಪ್ರತಿ ದಿನ ಎಲ್ಲರೂ ಮಾಡಬೇಕಾದ್ದನ್ನು ನೆನಪಿಸಬೇಕಾಗಿದೆ. ಇದು ಒಬ್ಬರು ಇನ್ನೊಬ್ಬರಿಗೆ ಹೇಳಬೇಕಾದ್ದಲ್ಲ, ಆದರೂ ಹೇಳುತ್ತಿದ್ದೇನೆ. ಮನಸ್ಸಿಟ್ಟು ಕೇಳಿ. ಹಸುವಿನ ಹಾಲು ಕರೆಯಲು ನಾವು ಒಬ್ಬ ಆಳನ್ನು ನೇಮಿಸಿಕೊಳ್ಳಬೇಕಾಗುತ್ತದೆ. ಯಾವುದೋ ಕಾರಣದಿಂದ ನಮಗೆ ನಾವು ಅಡಿಗೆಯಾಳನ್ನು ಇಟ್ಟುಕೊಳ್ಳಬೇಕಾದ ಪರಿಸ್ಥಿತಿ ಉಂಟಾದರೆ, ಅವರು ಅಡಿಗೆಯ ಮತ್ತು ಅಡುಗೆಗೆ ಬಳಸಿದ ಪಾತ್ರೆಗಳನ್ನು ತೊಳೆದು ಸ್ವಚ್ಛವಾಗಿಡುವ ಕೆಲಸ ಮಾತ್ರ ಮಾಡುತ್ತಾರೆ. ನಾವು ಹಿರಿಯರು ಕಿರಿಯರು ಎಲ್ಲರೂ ನಾವು ಉಂಡ ತಿಂದ ಪಾತ್ರೆಗಳನ್ನು ನಾವೇ ತೊಳೆದು ಸ್ವಚ್ಛವಾಗಿಡಬೇಕು. ಮನೆಯ ನೆಲ ಕಿಟಿಕಿ ಗೋಡೆಯನ್ನು ಸ್ವಚ್ಛವಾಗಿಡುವುದು ಕೂಡ ನಮ್ಮದೇ ಕೆಲಸ. ಮನೆಯ ಸುತ್ತ ಮುತ್ತ ಯಾವುದೇ ಕಸ ಕಡ್ಡಿ ಇರದಂತೆ ನಿಗಾವಹಿಸುವುದು ಕೂಡ ನಮ್ಮೆಲ್ಲರ ಜವಾಬ್ದಾರಿ'.

32

ಮರುದಿನದ ಸ್ವಾವಲಂಬಿ ಕುಟುಂಬದ ಸಭೆಯಲ್ಲಿ ಮುರಾರಿ ಮಾತಾಡಿದ,'ನಮ್ಮ ಶಾಲೆಗೆ ಹಳ್ಳಿಯ ಮಕ್ಕಳು ಬರಬಹುದು ಎಂದು ಆಗಲೇ

**ಪ್ರೀತಿ**

ಎರಡು ಹೃದಯಗಳ
ನಡುವಿನ
ರಹಸ್ಯ
ಪಿಸುಮಾತು!

★ ಕೆ ಬಿ.ರಂಗಸ್ವಾಮಿ



ಈಶ್ವರ